# ಕರ್ನಾಟಕ ಸರ್ಕಾರ

**ಸಂಖ್ಯೆ:** ಅಪಜೀ 204 ಸಿಆರ್‌ಝಡ್ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 15.02.2023.

ಇಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
(ಜೀವಿಪರಿಸ್ಥಿತಿ ಮತ್ತು ಪರಿಸರ),
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.

ಇವರಿಗೆ,

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
4. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನಂ. 49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು – 560 003.
5. ಮಹಾ ನಿರ್ದೇಶಕರು, ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, "ಹಸಿರು ಭವನ", ದೊರೆಸಾನಿಪಾಳ್ಯ, ಫಾರೆಸ್ಟ್, ವಿನಾಯಕನಗರ ಸರ್ಕಲ್, ಜೆ.ಪಿ.ನಗರ, 5ನೇ ಹಂತ, ಬೆಂಗಳೂರು–76.
6. ನಿರ್ದೇಶಕರು, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ, (ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ), ತೋಟಗಾರಿಕಾ ಕಾಲೇಜು ಹತ್ತಿರ, ಮೇಜರ್, ಉನ್ನಿಕೃಷ್ಣನ್ ರಸ್ತೆ, ವಿಧ್ಯಾರಣ್ಯಪುರ ಪೋಸ್ಟ್, ಬೆಂಗಳೂರು – 560 097.
7. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, 9ನೇ ಮತ್ತು 10ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಸಂಪಂಗಿ ರಾಮ ನಗರ, ಡಾ: ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು.
8. Dr. Shivakumar B. Haragi, Assistant Professor, Karnataka University Post Graduate Centre, Kodibag, Karwar.
9. Dr. M.D. Subash Chandran, consulting Scientist, (Ecology and Environment), Centre for Ecological Sciences, IISc, Bangalore.
10. Dr. Ramesh H., Associate Professor, Department of Applied Mechanics and Hydraulics, NITK, Surathkal, Mangaluru.

....2

11. Shri. Ramachandra Bhatta, Snehakunja Trust, Kasarkod Post, Honnavar Taluk, Uttara Kannada District.

ಮಾನ್ಯರೆ,

**ವಿಷಯ:** ದಿನಾಂಕ: 06.02.2023 ರಂದು ನಡೆದ ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದ 39ನೇ ಸಭೆಯ ನಡವಳಿಯನ್ನು ಸಲ್ಲಿಸುವ ಬಗ್ಗೆ.

* * * * *

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 06.02.2023 ರಂದು ಪೂರ್ವಾಹ್ನ 11:00 ಗಂಟೆಗೆ ವಿಡಿಯೋ ಸಂವಾದದ ಮೂಲಕ ನಡೆದ ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದ 39ನೇ ಸಭೆಯ ನಡವಳಿಯನ್ನು ಇದರೊಂದಿಗೆ ಲಗತ್ತಿಸಿ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.

(ಆರ್. ಗೋಕುಲ್)
ಸದಸ್ಯ ಕಾರ್ಯದರ್ಶಿ,
ಕರ್ನಾಟಕ ಕಡಲ ತೀರ ವಲಯ ನಿರ್ವಹಣಾ ಪ್ರಾಧಿಕಾರ,
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ

<u>ಪ್ರತಿಯನ್ನು:</u>

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, (ಜೀವಿಪರಿಸ್ಥಿತಿ ಮತ್ತು ಪರಿಸರ) ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಪ್ರಾದೇಶಿಕ ನಿರ್ದೇಶಕರು (ಪರಿಸರ), 1ನೇ ಮಹಡಿ, ಊರ್ವಸ್ಟೋರ್, ನಗರಾಭಿವೃದ್ಧಿ ಪ್ರಾಧಿಕಾರ ಕಟ್ಟಡ, ಮಂಗಳೂರು.
4. ಪ್ರಾದೇಶಿಕ ನಿರ್ದೇಶಕರ ಕಛೇರಿ (ಪರಿಸರ), 1ನೇ ಮಹಡಿ, 'ಸಿ' ಬ್ಲಾಕ್ 'ರಜತಾದ್ರಿ', 'ಜಿಲ್ಲಾ ಆಡಳಿತ ಕಛೇರಿಗಳ ಸಂಕೀರ್ಣ, ಮಣಿಪಾಲ, ಉಡುಪಿ ಜಿಲ್ಲೆ.
5. ಪ್ರಾದೇಶಿಕ ನಿರ್ದೇಶಕರು (ಪರಿಸರ), ಹೊಸ ಕೆ.ಹೆಚ್.ಬಿ ರೋಡ್, ಪರಿಸರ ಭವನ, ಹಬ್ಬುವಾಡ ಕಾರವಾರ.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 06.02.2023 ರಂದು 11:00 ಘಂಟೆಗೆ ವಿಡಿಯೋ ಸಂವಾದದ ಮೂಲಕ ನಡೆದ ಕರ್ನಾಟಕ ರಾಜ್ಯ ಕಡಲ ತೀರ ವಲಯ ನಿರ್ವಹಣಾ ಪ್ರಾಧಿಕಾರದ 39ನೇ ಸಭೆಯ ನಡಾವಳಿಗಳು:**

*ಸದಸ್ಯ ಕಾರ್ಯದರ್ಶಿಯವರು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು (ಜೀವಿಪರಿಸ್ಥಿತಿ ಮತ್ತು ಪರಿಸರ) ಪ್ರಾಧಿಕಾರದ, ಅಧ್ಯಕ್ಷರು ಮತ್ತು ಸದಸ್ಯರುಗಳನ್ನು & ಅಧಿಕಾರಿಗಳನ್ನು ಸ್ವಾಗತಿಸುವ ಮೂಲಕ ಸಭೆ ಪ್ರಾರಂಭವಾಯಿತು ಸಭೆಗೆ ಹಾಜರಾದವರ ವಿವರಗಳನ್ನು ಅನುಬಂಧ- I ರಲ್ಲಿ ಲಗತ್ತಿಸಿದೆ.*

39.1 ದಿನಾಂಕ: 15.11.2022 ರಂದು ನಡೆದ 38ನೇ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದ ಹಿಂದಿನ ಸಭೆಯ ನಡವಳಿಗೆ ದೃಢೀಕರಣ.

ದಿನಾಂಕ: 15.11.2022 ರಂದು ನಡೆದ 38ನೇ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದ ಹಿಂದಿನ ಸಭೆಯ ನಡವಳಿಗೆ ದೃಢೀಕರಣ ನೀಡುವ ಬಗ್ಗೆ ಪ್ರಾಧಿಕಾರದ ಮುಂದೆ ಪ್ರಸ್ತಾಪಿಸಲಾಯಿತು. ಸದರಿ ನಡಾವಳಿಗೆ ದೃಢೀಕರಣ ನೀಡಲಾಯಿತು

**39.2 ಕರಾವಳಿ ನಿಯಂತ್ರಣ ವಲಯ ನಿರಾಕ್ಷೇಪಣಾ ಪತ್ರ ನೀಡುವಂತೆ ಕೋರಿ ಬಂದಿರುವ ಹೊಸ ಪ್ರಸ್ತಾವನೆಗಳು :-**

**39.2.1 Request for issue of CRZ clearance for Maintenance of existing Anode Bed of Cathodic Protection Station at Thokur Village by M/s.Kudremukh Iron Ore Corporation ltd (FEE/306/CRZ/2022)**

| | | |
|---|---|---|
| 1. | Name of the Project | Maintenance of existing Anode Bed of Cathodic Protection Station |
| 2. | Name of the Applicant | Chief General Manager (Production)<br>Kudremukh Iron Ore Corporation Ltd (KIOCL) |
| 3. | Location of the Project Village/Town, Taluk, Dt. | Thokur village, Mangaluru Taluk, Dakshina Kannada district.<br>GPS Reading: |

| Co-ordinates | Longitude | Latitude |
|---|---|---|
| P1 | 74.84318 | 12.9598 |
| P2 | 74.84318 | 12.95979 |
| P3 | 74.84351 | 12.95982 |
| P 4 | 74.8435 | 12.95983 |
| P5 | 74.84318 | 12.95977 |
| P6 | 74.84318 | 12.95976 |
| P7 | 74.84351 | 12.95979 |
| P8 | 74.84351 | 12.9598 |

| | | |
|---|---|---|
| 4. | Sy. No. | 139/3 & 139/4 |
| 5. | Extent of land | 70m2 |
| 6. | CRZ Classification | CRZ I. |
| 7. | Project Cost | Rs . 2 Lakhs |
| 8. | Activities proposed | Maintenance of existing Anode Bed of Cathodic Protection Station.<br>The proposed anode bed replacement will be mainly done by excavating up to 1mtr. depth by removing the existing old anode bed and replacing it with new bed with 400m power cable to the DC Power source. |
| 9. | Whether permitted activity as per CRZ Notification? If yes, specify the relevant rules | Yes<br>The area falls under CRZ I(i) (Mangrove buffer) as per approved Coastal Zone management Plan. In Para 8 I CRZ-I,- (i) (b) there is provision for pipelines, conveying systems including transmission lines and in Para 8 I CRZ-I,- (i) (c) there is provision for facilities essential for activities permissible under CRZ I. |
| 10. | The details of recommendations of the District Coastal Zone Management Authority (DCZMA) | The DCZMC, meeting held on 17-08-2022 has recommended proposal to KSCZMA. |
| 11. | Details of Processing fee | Processing fees: Paid Rs.25,000/- Chalan No. CR0822040600221767 Dated: 08-8-2022. |
| 12 | Whether issue of clearance is within the scope of SCZMA or NCZMA? Specify relevant rules. | SCZMA<br><br>Proposed activity is permissible under Para 8 I CRZ-I,- (i) (b) there is provision for pipelines, conveying systems including transmission lines and in Para 8 I CRZ-I,- (i) (c) there is provision for facilities essential for activities permissible under CRZ I. |
| 13 | Any other details | |

*The Authority after discussions and deliberations decided to issue CRZ clearance for Maintenance of existing Anode Bed of Cathodic Protection Station at Thokur village, Mangaluru Taluk, Dakshina Kannada district by Chief General Manager (Production) Kudremukh Iron Ore Corporation Ltd (KIOCL) as per para* 8 I CRZ-I - (i) (b) & (c) *of CRZ Notification, 2011, with the following conditions:-*

1. *No mangrove/vegetation/organism should be damaged during construction stage.*
2. *No solid waste should be let out into the nearest water bodies.*
3. *All provisions of CRZ notification 2011 should be followed.*

**39.2.2** ಯೋಜನಾ ಅಭಿಯಂತರರು, ಉಡುಪಿ ನಿರ್ಮಿತಿ, ಉಡುಪಿ ಇವರು ಉಡುಪಿ ಜಿಲ್ಲೆ ಬ್ರಹ್ಮಾವರ ತಾಲೂಕು ಕೋಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೋಡಿ ಬೇಂಗ್ರೆ ಸಮುದ್ರ ತೀರ ಸಮೀಪ ಶೌಚಾಲಯ ನಿರ್ಮಾಣ ಕಾಮಗಾರಿಗೆ ನಿರಾಕ್ಷೇಪಣಾ ಪತ್ರ ಕೋರಿರುವ ಬಗ್ಗೆ **(ಅಪಜೀ 304 ಸಿಆರ್‌ಝೆಡ್ 2022).**

| | | |
|---|---|---|
| 1. | ಯೋಜನೆಯ ಹೆಸರು | ಶೌಚಾಲಯ ನಿರ್ಮಾಣ ಮಾಡಲು |
| 2. | ಅರ್ಜಿದಾರರ ಹೆಸರು ಮತ್ತು ವಿಳಾಸ | ಯೋಜನಾ ಅಭಿಯಂತರರು<br>ಉಡುಪಿ ನಿರ್ಮಿತಿ ಕೇಂದ್ರ, ಉಡುಪಿ |
| 3. | ಯೋಜನೆಯ ಸ್ಥಳ, ಗ್ರಾಮ, ತಾಲೂಕು ಮತ್ತು ಜಿಲ್ಲೆ | ಕೋಡಿ ಗ್ರಾಮ, ಬ್ರಹ್ಮಾವರ ತಾಲೂಕು ಮತ್ತು ಉಡುಪಿ<br>**GPS Reading**<br>N 13.43782$^{0}$ E 74.[illegible] \| N 13.43783$^{0}$ E 74.[illegible]<br>N 13.43789$^{0}$ E 74.69519$^{0}$ \| N 13.43789$^{0}$ E 74.69526$^{0}$ |
| 4. | ssಸರ್ವೆ ನಂಬರ್ | - |
| 5. | ಕಟ್ಟಡದ ವಿಸ್ತೀರ್ಣ | 56.06 ಚ.ಮೀ. |
| 6. | ಸಿ.ಆರ್.ಜೆಡ್ ವರ್ಗೀಕರಣ | CRZ-III NDZ |
| 7. | ಯೋಜನೆಯ ವೆಚ್ಚ | 15.00 ಲಕ್ಷ |
| 8. | ಪ್ರಸ್ತಾವಿತ ಚಟುವಟಿಕೆಗಳು | ಶೌಚಾಲಯ ನಿರ್ಮಾಣ |
| 9. | ಸಿ.ಆರ್.ಜಡ್ ಅಧಿಸೂಚನೆ ಪ್ರಕಾರದ ಸದರಿ ಚಟುವಟಿಕೆಗಳು ಅನುಮತಿಸಬಹುದೆ? ಹೌದು ಆಗಿದ್ದಲ್ಲಿ, ಸಂಬಂಧಿತ ನಿಯಮಗಳನ್ನು ಸೂಚಿಸಿ | ಹೌದು<br>ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2011 ರ ಪ್ಯಾರಾ 8 III CRZ-III (iii) (j) ರ ಪ್ರಕಾರ ಅವಕಾಶವಿರುತ್ತದೆ. |

| | | |
|---|---|---|
| 10. | ಜಿಲ್ಲಾ ಕರಾವಳಿ ವಲಯ ನಿರ್ವಹಣಾ ಸಮಿತಿ ಸಭೆಯ ಶಿಫಾರಸ್ಸುಗಳ ವಿವರ | ದಿನಾಂಕ: 28-09-2022 ರಂದು ನಡೆದ ಜಿಲ್ಲಾ ಕರಾವಳಿ ವಲಯ ನಿರ್ವಹಣಾ ಸಮಿತಿ ಸಭೆಯಲ್ಲಿ ಶಿಫಾರಸ್ಸು ಮಾಡಲಾಗಿದೆ. |
| 11 | ಅರ್ಜಿ ಪರಿಷ್ಕರಣಾ ಶುಲ್ಕ ಪಾವತಿಸಿದ ವಿವರಗಳು | - |
| 12. | SCZMA ಅಥವಾ NCZMA ವ್ಯಾಪ್ತಿಯೊಳಗೆ ಬರುತ್ತದೆಯೇ? ಸಂಬಂಧಿಸಿದ ನಿಯಮಗಳನ್ನು ನಮೂದಿಸಿ | KSCZMA |
| 13. | ಇತರೆ ವಿವರಗಳು | |

*ಪ್ರಾಧಿಕಾರವು ಸದರಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಗಿ, ಬ್ರಹ್ಮಾವರ ತಾಲೂಕು ಕೋಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೋಡಿ ಬೇಂಗ್ರೆ ಸಮುದ್ರ ತೀರ ಸಮೀಪ ಶೌಚಾಲಯ ನಿರ್ಮಾಣ ಕಾಮಗಾರಿಗೆ* ಯೋಜನಾ ಅಭಿಯಂತರರು, ಉಡುಪಿ ನಿರ್ಮಿತಿ ಕೇಂದ್ರ, ಉಡುಪಿ ರವರಿಗೆ ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ-2011 ರ ಪ್ಯಾರಾ 8 III CRZ-III (iii) (j) ರಂತೆ ಈ ಕೆಳಕಂಡ ಷರತ್ತುಗಳೊಂದಿಗೆ ಕರಾವಳಿ ನಿಯಂತ್ರಣ ವಲಯ ನಿರಾಕ್ಷೇಪಣಾ ಪತ್ರ ನೀಡಲು ನಿರ್ಣಯಿಸಿತು:

1. *ಕಟ್ಟಡ ನಿರ್ಮಾಣ ಹಂತದಲ್ಲಿ ಉತ್ಪತ್ತಿಯಾಗುವ ಯಾವುದೇ ತ್ಯಾಜ್ಯ ನದಿ, ಹಳ್ಳ, ತೊರೆ, ಸಮುದ್ರ ಮುಂತಾದ ಜಲಮೂಲಗಳಿಗೆ ಸೇರದಂತೆ ಎಚ್ಚರಿಕೆ ವಹಿಸತಕ್ಕದ್ದು.*
2. *ಕಟ್ಟಡ ನಿರ್ಮಾಣದ ಸಂದರ್ಭದಲ್ಲಿ ಅಲ್ಲಿನ ಪರಿಸರದ ಮೇಲ್ಮೈ ಏರುಪೇರಾಗದಂತೆ ಮತ್ತು ಮಳೆನೀರಿನ ಹರಿವಿಗೆ ಅಡಚಣೆಯುಂಟಾಗದಂತೆ ಮುನ್ನೆಚ್ಚರಿಕೆ ವಹಿಸತಕ್ಕದ್ದು.*
3. *ಯೋಜನೆಯ ಕಾರ್ಯಾಚರಣೆಯ ಹಂತದಲ್ಲಿ ನಿಯಮಾನುಸಾರ ಘನ ತ್ಯಾಜ್ಯಗಳನ್ನು ಸಂಗ್ರಹಿಸಿ ವೈಜ್ಞಾನಿಕವಾಗಿ ವಿಲೇಗೊಳಿಸಲು ಕ್ರಮ ವಹಿಸತಕ್ಕದ್ದು.*
4. *ಸದರಿ ಘಟಕದ ಕಾರ್ಯಾಚರಣೆಯ ಹಂತದಲ್ಲಿ ಉತ್ಪತ್ತಿಯಾಗುವ ಕೊಳಚೆ ನೀರು ನದಿ, ಹಳ್ಳ, ತೊರೆ, ಸಮುದ್ರ ಮುಂತಾದ ಜಲಮೂಲಗಳಿಗೆ ಸೇರದಂತೆ ಎಚ್ಚರಿಕೆ ವಹಿಸತಕ್ಕದ್ದು ಹಾಗೂ ವೈಜ್ಞಾನಿಕವಾಗಿ ಸಂಸ್ಕರಿಸತಕ್ಕದ್ದು.*
5. *ಸದರಿ ಘಟಕದ ಕಾರ್ಯಾಚರಣೆಗಾಗಿ ಯಾವುದೇ ಕಾರಣಕ್ಕೂ ಸದರಿ ಪ್ರದೇಶದಲ್ಲಿ ಅಂತರ್ಜಲವನ್ನು ಹೊರತೆಗೆಯತಕ್ಕದ್ದಲ್ಲ.*
6. *ಪ್ರಸ್ತಾವನೆಯ ಅಂಗವಾಗಿ ಕೈಗೊಳ್ಳುವ ಎಲ್ಲಾ ಕಾಮಗಾರಿ ಮತ್ತು ಚಟುವಟಿಕೆಗಳು CRZ ಅಧಿಸೂಚನೆ, ದಿನಾಂಕ: 06.01.2011 ಕ್ಕೆ ಒಳಪಟ್ಟಿರತಕ್ಕದ್ದು.*

**39.2.3 Request for issue of NOC for Four laning of Honnavara port connectivity road from 0 km to 2.58km connecting Honnavara port with NH-6 at km 195.986 and improve NH - 66 from 195km to 197km integrate port**

**connectivity on EPC Mode under Bharatmala Phase - 1 in Kasarakoda Village of Honnavar Taluk of Uttara Kannada District by Assistant Executive Engineer, Port Sub-Division, Honnavara (FEE 78 CRZ 2023)**

| | | |
|---|---|---|
| 1 | Name of the Purpose | Four laning of Honnavara Port Connectivity road from 0 km to 2.58 km connecting Honnavara Port with NH-66 at km 195.986 and improve NH-66 from 195km to 197 km integrate port connectivity on EPC Mode under Bharatmala Phase-I. |
| 2 | Name of the Applicant | Assistant Executive Engineer, Port Sub-Division, Honnavara |
| 3 | Location of the Project village/Town, Taluk, Dt. | Kasarakoda Village of Honnavar Taluk of Uttara Kannada District |
| 4 | Survey No's | Notified Port area & Intertidal zone<br>Reserved Forest Area : F.Sy.No: 233 & 237<br>NH -66 |
| 5 | Extent of land | - |
| 6 | CRZ Classification | CRZ-IA, CRZ-IB, CRZ-III (**NDZ 200-500m)**<br>**GPS Coordinates:**<br>N-14°15'10.19" N-14°16'54.15"<br>E-74°26'18.37" E-74°26'18.37" |
| 7 | Project cost | Rs. 13800.00 Lakhs |
| 8 | Activities Proposed | • Proposed for 4 lane Road Connectivity to port from – NH 66 - Length of 2.58Km average width 25mtr.<br>• Improvements to existing NH 66 - Length of 2 kms, service road and construction of flyover. |
| 9 | Whether permitted activity as per CRZ Notification? If yes, specify the relevant rules. | Yes<br>As per para **3 (i) a** – Port is a waterfront activity,<br>Para **4(i) a** – clearance for waterfront and foreshore activities,<br>Para **4 (ii) f** – foreshore requiring facility for transport of |

| | | |
|---|---|---|
| | | raw materials<br><br>Para **3(iv) a-** setting up of foreshore facilities<br><br>As per Para **8 III (a) (i),** NDZ shall not applicable for area falling in port limits of CRZ Notification, 2011. |
| **10** | The details of recommendations of the District Coastal Zone Management Committee (DCZMC) | The proposal has been deliberated and recommended at DCZMC meeting held on 12.01.2023 |
| **11** | Whether issue of clearance is within the scope of SCZMA or NCZMA? Specify relevant rules | NCZMA |
| 12 | Details of processing fee | Not paid |
| 13. | Any other details | - |

*During the deliberation the Ex-officio Member Dr. M.D.Subash Chandran stated that since the project is proposed at river mouth of Sharavathi estuary, aquatic importance of fish breeding area and marine Sensitive Areas is to be taken care off.*

*Another Ex-officio Member Dr. Shivakumar B.Haragi has stated that as the entire 4 lane project is proposed below the hazard line and eroding stretch, this issue has to be re-examined. He also expressed that if there is any Olive Redly turtle nesting area falling in the said project area, care has to be taken to protect the same.*

*NGO Member of the Authority Sri Ramachandra Bhatta, expressed that since the project is proposed in the high density area it is required to take care of eco sensitive aspect.*

*After detailed discussion and deliberation the Authority deffered the subject for want of additional information raised by the Members from the project proponent within two days time to take further action in the said project.*

**39.2.4 CRZ clearance for Usage of Kaccha road along the sea shore as connecting at Kasarkod village for development of Honnavara Port by HPPL (FEE 264 ENV 2022)**

| | | |
|---|---|---|
| 1. | Name of the Purpose | Usage of kaccha road along the sea shore as connecting road at Kasarkod village for development of Honnavar Port. |
| 2. | Name of the Applicant | Director of Ports and member (Maritime & IWT Operations) Karnataka Maritime Board |
| 3. | Location of the Project village/Town, Taluk, Dt. | Kasarkod Village, Honnavar Taluk<br>**GPS Reading:**<br>N-14°15'49.20" N-14°16'54.43"<br>E-74°25'54.48" E-74°25'33.28" |
| 4. | Survey No's | Notified Port area |
| 5. | Extent of land | 2.1 km Kaccha Road |
| 6. | CRZ Classification | CRZ-III |
| 7. | Project cost | - |
| 8. | Activities Proposed | Usage of existing Kaccha road along the sea shore at Kasarkod village for development of Honnavar Port. |
| 9. | Whether permitted activity as per CRZ Notification? If yes, specify the relevant rules. | Yes ,<br>As per para 4(i) (a), 4(ii) (f) & 8 III (a) (i) of CRZ Notification, 2011. |
| 10. | The details of recommendations of the District Coastal Zone Management Committee (DCZMC) | The proposal has been deliberated and recommended at DCZMC meeting held on |
| 11. | Whether issue of clearance is within the scope of SCZMA or NCZMA? Specify relevant rules | As per Hon'ble NGT Order dated 21.10.2022 in OA No.76 of 2022 (SZ) (Annexed) |
| 12 | Details of processing fee | Not paid |

| | | |
|---|---|---|
| 13. | Any other details | - |

*Since the issue is before the Hon'ble NGT (vide OA No.76 of 2022 (SZ)), as per the request made by the petitioner through her legal representative, an opportunity was given to hear their submission in this regard. After detailed discussion and deliberation the Authority deffered the subject and directed the legal representative and the proponent to submit all the required information and relevant documents within two days time to take further action in the matter.*

<u>39.3 ಉಲ್ಲಂಘನೆ ಪ್ರಕರಣ</u>

**39.3.1** ಕಾರ್ಯದರ್ಶಿಗಳು, ಉತ್ತರ ಕನ್ನಡ ಜಿಲ್ಲಾ, ಪ್ರವಾಸಿ ಸ್ಥಳಗಳ ಅಭಿವೃದ್ಧಿ ಹಾಗೂ ಸಂರಕ್ಷಣಾ ಸಮಿತಿ (ರಿ) ಉತ್ತರ ಕನ್ನಡ ಕಾರವಾರ ರವರ ಕಾರವಾರ ತಾಲ್ಲೂಕಿನ ಡಾ: ರವೀಂದ್ರನಾಥ ಠಾಗೋರ್ ಕಡಲ ತೀರದಲ್ಲಿ ವಿವಿಧ ಚಟುವಟಿಕೆಗಳನ್ನು ಕೈಗೊಂಡಿರುವ ಬಗ್ಗೆ **(ಅಪಜೀ 6 ಸಿಆರ್‌ಝಡ್ 2018).**

ಉತ್ತರ ಕನ್ನಡ ಜಿಲ್ಲೆಯ ಕಾರವಾರದ ಸಮುದ್ರ ತೀರದಲ್ಲಿ ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ ಉಲ್ಲಂಘಿಸಿ ಅನಧಿಕೃತವಾಗಿ ಕಟ್ಟಡಗಳ ನಿರ್ಮಾಣವಾಗುತ್ತಿದ್ದು, ರೆಸ್ಟೋರೆಂಟ್ ನಿರ್ಮಾಣ, ಹೋಟೆಲ್‌ನ ವಿಸ್ತರಣಾ ಕಟ್ಟಡ ನಿರ್ಮಾಣ, ಮೀನು ಮಾರುಕಟ್ಟೆ ಕಟ್ಟಡ, ಖಾಸಗಿ ಬಸ್ ನಿಲ್ದಾಣ, ಬಹುಮಹಡಿ ಕಟ್ಟಡ ಹಾಗೂ ರಾಕ್ ಗಾರ್ಡನ್ ಮುಂತ್ರಾದವುಗಳು ತಲೆ ಎತ್ತುತ್ತಿದ್ದು ಈ ಬಗ್ಗೆ ಸೂಕ್ತ ಕ್ರಮವಹಿಸುವಂತೆ ಕೋರಿ ಶ್ರೀ. ಬಾಲಕೃಷ್ಣ ಎಸ್.ಪೈ., ವಕೀಲರು ಲೀಗಲ್ ನೋಟೀಸ್ ನೀಡಿರುತ್ತಾರೆ.

ಅದರಂತೆ CRZ ಅಧಿಸೂಚನೆಯನ್ನು ಉಲ್ಲಂಘಿಸಿ ಈ ಕೆಳಕಂಡ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿರುವ ಬಗ್ಗೆ ದಿನಾಂಕ: 27.04.2018 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ಪರಿಶೀಲಿಸಲಾಗಿತ್ತು.

1. ಉತ್ತರ ಕನ್ನಡ ಜಿಲ್ಲೆಯ ಕಾರವಾರದ ಕರಾವಳಿ ನಿಯಂತ್ರಣ ವಲಯ ವ್ಯಾಪ್ತಿಯಲ್ಲಿ ವ್ಯವಸ್ಥಾಪಕರು, ಜಿಲ್ಲಾ ನಿರ್ಮಿತಿ ಕೇಂದ್ರ ಕಾರವಾರ ರವರು CRZ ಪೂರ್ವಾನುಮತಿ ಪಡೆಯದೇ CRZ-I ಹಾಗೂ CRZ II ಪ್ರದೇಶಗಳಲ್ಲಿ ರಾಕ್ ಗಾರ್ಡನ್ ನಿರ್ಮಾಣ ಕಾಮಗಾರಿ ಕೈಗೊಂಡಿರುವುದು. ಸದರಿ ಕಾಮಗಾರಿಯನ್ನು ಕೈಗೊಳ್ಳಲು ಡಾ. ರವೀಂದ್ರನಾಥ ಠಾಗೋರ್ ಕಡಲ ತೀರಗಳ ಅಭಿವೃದ್ಧಿ ಮತ್ತು ಸಂರಕ್ಷಣಾ ಸಮಿತಿಯಿಂದ ಅನುಮತಿ ನೀಡಲಾಗಿರುತ್ತದೆ.
2. ಕಾರವಾರ ಕಡಲ ತೀರದಲ್ಲಿ ಹೋಟೆಲ್ ಡ್ರೈವ್-ಇನ್ ಪಕ್ಕದಲ್ಲಿ ಕರಾವಳಿ ನಿಯಂತ್ರಣ ವಲಯ – I ಹಾಗೂ ಭಾಗಶಃ ಕರಾವಳಿ ನಿಯಂತ್ರಣ ವಲಯ II ರಲ್ಲಿ ಅನಧಿಕೃತ ಕಟ್ಟಡ ನಿರ್ಮಾಣ ಮಾಡುತ್ತಿರುವುದು.

3. ಶ್ರೀ. ರಾಜೇಶ್ ಎಸ್. ಕಾಮತ್, ಮಹಾಲಕ್ಷ್ಮಿ ಎಲೆಕ್ಟ್ರಾನಿಕ್, ಕೋಡಿಬಾಗ್ ಕಾರವಾರ ರವರು ಕಾರವಾರ ಕಡಲ ತೀರದಲ್ಲಿ ಕರಾವಳಿ ನಿಯಂತ್ರಣ ವಲಯ-I ಹಾಗೂ ಭಾಗಶಃ ಕರಾವಳಿ ನಿಯಂತ್ರಣ ವಲಯ II ರಲ್ಲಿ ಬ್ರಾಂಡೆಂಡ್ ಆಹಾರ ಮಳಿಗೆ ನಿರ್ಮಾಣ ಮಾಡುತ್ತಿರುವುದು. ಸದರಿ ಪ್ರದೇಶವನ್ನು ಡಾ. ರವೀಂದ್ರನಾಥ ಠಾಗೋರ್ ಇವರ ಸಂರಕ್ಷಣಾ ಸಮಿತಿಯಿಂದ ಗುತ್ತಿಗೆ ಪಡೆಯಲಾಗಿದೆ.
4. ಸಹಾಯಕ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ರವರು ಕಾರವಾರ ತಾಲ್ಲೂಕಿನ ಚಿತ್ತಾಕುಲಾ ಗ್ರಾಮದ ಸ.ನಂ. 6ಅ1ಅ ರಲ್ಲಿ ಕರಾವಳಿ ನಿಯಂತ್ರಣ ವಲಯ – III ರ ಅಭಿವೃದ್ಧಿ ನಿಷಿದ್ಧ ಪ್ರದೇಶದಲ್ಲಿ ಸಾಹಸ ಕ್ರೀಡೆಗೆ ಸಂಬಂಧಿಸಿದಂತೆ ವಸತಿ ನಿಲಯ ಕಟ್ಟಡ ನಿರ್ಮಿಸಿರುವುದು.
5. ಮಯೂರವರ್ಮ ವೇದಿಕೆಯ ಹಿಂಭಾಗದಲ್ಲಿ ಕರಾವಳಿ ನಿಯಂತ್ರಣ ವಲಯ – II ರಲ್ಲಿ ಕಟ್ಟಡವನ್ನು ಮತ್ತು ತಾತ್ಕಾಲಿಕ ಮೀನು ಮಾರುಕಟ್ಟೆಯನ್ನು ನಿರ್ಮಿಸಿರುವುದು.

ಈ ಮೇಲ್ಕಂಡ ಯಾವುದೇ ನಿರ್ಮಾಣಗಳಿಗೆ ಕರಾವಳಿ ನಿಯಂತ್ರಣ ವಲಯ ಪೂರ್ವಾನುಮತಿ ಪಡೆದಿರುವುದಿಲ್ಲ. ಸಿಆರ್‌ಝಡ್ ಅಧಿಸೂಚನೆ 2011 ರಂತೆ ಸದರಿ ಚಟುವಟಿಕೆಗಳನ್ನು ಉಲ್ಲಂಘನೆಯೆಂದಯ ಪರಿಗಣಿಸಿ ಪ್ರಾಧಿಕಾರವು ಪರಿಸರ (ಸಂರಕ್ಷಣೆ) ಕಾಯ್ದೆ 1986 ರ ಸೆಕ್ಷನ್ 5 ರಂತೆ ಉಲ್ಲಂಘನೆದಾರರಾದ ಹೆಚ್ಚುವರಿ ಜಿಲ್ಲಾಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಗಳು ರವೀಂದ್ರನಾಥ ಠಾಗೋರ್ ಕಡಲ ತೀರಗಳ ಅಭಿವೃದ್ಧಿ ಮತ್ತು ಸಂರಕ್ಷಣಾ ಸಮಿತಿ, ಕಾರವಾರ, ಸಹಾಯಕ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕಾರವಾರ, ಕಮಿಷನರ್ ನಗರ ಸಭೆ, ಕಾರವಾರ ಇವರಿಗೆ ನೋಟಿಸ್ ನೀಡಲು ತೀರ್ಮಾನಿಸಿತ್ತು.

ಪ್ರಾಧಿಕಾರದ ನಿರ್ಣಯದಂತೆ ಪರಿಸರ (ಸಂರಕ್ಷಣೆ) ಕಾಯ್ದೆ 1986 ರ ಸೆಕ್ಷನ್ 5 ರಂತೆ ಉಲ್ಲಂಘನೆದಾರರಾದ ಹೆಚ್ಚುವರಿ ಜಿಲ್ಲಾಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಗಳು ರವೀಂದ್ರನಾಥ ಠಾಗೋರ್ ಕಡಲ ತೀರಗಳ ಅಭಿವೃದ್ಧಿ ಮತ್ತು ಸಂರಕ್ಷಣಾ ಸಮಿತಿ, ಕಾರವಾರ, ಸಹಾಯಕ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕಾರವಾರ, ಕಮಿಷನರ್ ನಗರ ಸಭೆ, ಕಾರವಾರ ಇವರಿಗೆ ನೋಟಿಸ್ ನೀಡಲಾಗಿತ್ತು.

ಈ ನೋಟಿಸ್‌ಗೆ ಉತ್ತರವಾಗಿ ಹೆಚ್ಚುವರಿ ಜಿಲ್ಲಾಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಗಳು, ಉತ್ತರ ಕನ್ನಡ ಪ್ರವಾಸೋದ್ಯಮ ತಾಣ ಮತ್ತು ಅಭಿವೃದ್ಧಿ, ಸಂರಕ್ಷಣಾ ಸಮಿತಿ ಕಾರವಾರ ಇವರು ದಿನಾಂಕ: 29.06.2018 ರಂದು ಪ್ರಾಧಿಕಾರಕ್ಕೆ ವರದಿ ಸಲ್ಲಿಸಿದ್ದು, ಸದರಿ ವರದಿಯಲ್ಲಿ ಹಳೆ ಕಟ್ಟಡಗಳನ್ನು ನವೀಕರಿಸಲಾಗಿದೆ ಹಾಗೂ ಹೊಸದಾಗಿ ಯಾವುದೇ ನಿರ್ಮಾಣವನ್ನು ಮಾಡಿರುವುದಿಲ್ಲವೆಂದು ಸಮಜಾಯಿಷಿ ನೀಡಿರುತ್ತಾರೆ.

ಸದರಿ ಉಲ್ಲಂಘನಾ ಪ್ರಕರಣವನ್ನು ದಿನಾಂಕ: 07.03.2019 ರಂದು ಜರುಗಿದ ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ವಿವರವಾಗಿ ಚರ್ಚಿಸಿ, ಹೆಚ್ಚುವರಿ ಜಿಲ್ಲಾಧಿಕಅರಿ ಕಾರವಾರಾ ರವರು ಸಲ್ಲಿಸಿರುವ ವರದಿಯನ್ನು ಪ್ರಾಧಿಕಾರವು ವಿವರಾಗಿ ಪರಿಶೀಲಿಸಿತ್ತು. ದಿನಾಂಕ; 29.06.2018 ರಂದು ಹೆಚ್ಚುವರಿ ಜಿಲ್ಲಾಧಿಕಾರಿ ಕಾರವಾರ ರವರು ಸಲ್ಲಿಸಿರುವ ವರದಿಯಲ್ಲಿನ ಅಂಶಗಳ ಮೇಲೆ ಇನ್ನೊಮ್ಮೆ ಸ್ಥಲ ಪರಿಶೀಲನೆ ನಡೆಸಿ

ವಿವರವಾದ ವರದಿಯನ್ನು ನೀಡುವಂತೆ ಪ್ರಾದೇಶಿಕ ನಿರ್ದೇಶಕರು (ಪರಿಸರ) ಕಾರವಾರ ರವರಿಗೆ ತಿಳಿಸಲು ನಿರ್ಣಯಿಸಲಾಯಿತು ಹಾಗೂ ಹೆಚ್ಚುವರಿ ಜಿಲ್ಲಾಧಿಕಾರಿಗಳು ಅವರ ವರದಿಯಲ್ಲಿ ಸದರಿ ಕಟ್ಟಡಗಳು 1991ರ ಪೂರ್ವದಲ್ಲಿದ್ದ ಅಧಿಕೃತ ಕಟ್ಟಡಗಳು ಎಂಬುದಾಗಿ ಸಮರ್ಥಿಸಿಕೊಂಡಿರುವುದರಿಂದ 1991 ರ ಪೂರ್ವದಲ್ಲಿಯೇ ಈ ಕಟ್ಟಡಗಳು ಅಸ್ಥಿತ್ವದಲ್ಲಿದ್ದವು ಎಂಬುದಕ್ಕೆ ಪುರಾವೆಯಾಗಿ ದಾಖಲೆಯನ್ನು ಒದಗಿಸುವಂತೆ, ಹೆಚ್ಚುವರಿ ಜಿಲ್ಲಾಧಿಕಾರಿ, ಕಾರವಾರ ಇವರಿಗೆ ದಿನಾಂಕ: 09.09.2020 ರಂದು ಸೂಚನೆ ನೀಡಲಾಗಿತ್ತು, ಈ ಬಗ್ಗೆ ಯಾವುದೇ ವರದಿ ಸ್ವೀಕೃತವಾಗಿಲ್ಲದ ಕಾರಣ ದಿನಾಂಕ: 25.2.2022 ರಂದು ನೆನಪೋಲೆ ಬರೆಯಲಾಗಿದೆ. ಆದರೆ ಇದುವರೆಗೂ ಯಾವುದೇ ವರದಿ ಸ್ವೀಕೃತವಾಗಿಲ್ಲ.

*ಪ್ರಾಧಿಕಾರವು ಸದರಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಗಿ, ಉತ್ತರ ಕನ್ನಡ ಜಿಲ್ಲೆಯ ಕಾರವಾರದ ಕಡಲ ತೀರದಲ್ಲಿ ಕರಾವಳಿ ನಿಯಂತ್ರಣ ವಲಯ ಅಧಿಸೂಚನೆಯನ್ನು ಉಲ್ಲಂಘಿಸಿ ಅನಧಿಕೃತವಾಗಿ ನಿರ್ಮಾಣ ಕಾಮಗಾರಿ ಕೈಗೊಂಡ ಈ ಕೆಳಕಂಡ ಉಲ್ಲಂಘನೆದಾರರಿಗೆ* ಪರಿಸರ (ಸಂರಕ್ಷಣೆ) ಕಾಯ್ದೆ 1986 ಕಾಯ್ದೆ ***1986*** *ರ ಸೆಕ್ಷನ್* 5 ರಂತೆ ***(Direction)*** *ನಿರ್ದೇಶನವನ್ನು ನೀಡಲು ತೀರ್ಮಾನಿಸಲಾಯಿತು.*

1. *ರಾಕ್ ಗಾರ್ಡನ್, ಹೋಟೆಲ್ ಡ್ರೈವ್ - ಇನ್ ಪಕ್ಕದಲ್ಲಿ ಅನಧಿಕೃತ ಕಟ್ಟಡ ನಿರ್ಮಾಣ ಹಾಗೂ ಬ್ರಾಂಡೆಡ್ ಆಹಾರ ಮಳಿಗೆ ನಿರ್ಮಿಸಿರುವುದನ್ನು ತೆರವುಗೊಳಿಸುವಂತೆ , ಡಾ.ರವಿಂದ್ರನಾಥ್ ಟಾಗೋರ್ ಕಡಲ ತೀರಗಳ ಅಭಿವೃದ್ಧಿ ಮತ್ತು ಸಂರಕ್ಷಣಾ ಸಮಿತಿ, ಕಾರವಾರ ರವರಿಗೆ* ಪರಿಸರ (ಸಂರಕ್ಷಣೆ) ಕಾಯ್ದೆ 1986 ಕಾಯ್ದೆ ***1986*** *ರ ಸೆಕ್ಷನ್* 5 ರಂತೆ ***(Direction)*** *ನಿರ್ದೇಶನವನ್ನು ನೀಡಲು ತೀರ್ಮಾನಿಸಲಾಯಿತು.*
2. *ಕಾರವಾರ ತಾಲ್ಲೂಕಿನ ಚಿತ್ತಾಕುಲ ಗ್ರಾಮದ ಸ.ನಂ. 6 ಅ1ಅ ರಲ್ಲಿ ಅಭಿವೃದ್ಧಿ ನಿಷಿದ್ಧ ಪ್ರದೇಶದಲ್ಲಿ ನಿರ್ಮಿಸಿರುವ ಕ್ರೀಡಾ ಇಲಾಖೆಯ ವಸತಿ ನಿಲಯ ಕಟ್ಟಡವನ್ನು ತೆರವುಗೊಳಿಸುವಂತೆ, ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕಾರವಾರ, ಕಮಿಷನರ್ ನಗರ ಸಭೆ, ಕಾರವಾರ ಇವರಿಗೆ* ಪರಿಸರ (ಸಂರಕ್ಷಣೆ) ಕಾಯ್ದೆ 1986 ಕಾಯ್ದೆ ***1986*** *ರ ಸೆಕ್ಷನ್* 5 ರಂತೆ ***(Direction)*** *ನಿರ್ದೇಶನವನ್ನು ನೀಡಲು ತೀರ್ಮಾನಿಸಲಾಯಿತು..*
3. *ಕಾರವಾರದ ಕಡಲ ತೀರದ ಮಯೂರವರ್ಮ ವೇದಿಕಯ ಹಿಂಭಾಗ ನಿರ್ಮಿಸಲಾದ ಕಟ್ಟಡ & ತಾತ್ಕಾಲಿಕ ಮೀನು ಮಾರುಕಟ್ಟೆ ಯನ್ನು ತೆರವುಗೊಳಿಸುವಂತೆ, ಆಯುಕ್ತರು, ನಗರಸಭೆ, ಕಾರವಾರ ರವರಿಗೆ* ಪರಿಸರ (ಸಂರಕ್ಷಣೆ) ಕಾಯ್ದೆ 1986 ಕಾಯ್ದೆ ***1986*** *ರ ಸೆಕ್ಷನ್* 5 ರಂತೆ ***(Direction)*** *ನಿರ್ದೇಶನವನ್ನು ನೀಡಲು ತೀರ್ಮಾನಿಸಲಾಯಿತು.*
4. ಉತ್ತರ ಕನ್ನಡ ಜಿಲ್ಲೆ ಕಾರವಾರದ ಕಡಲ ತೀರದಲ್ಲಿ *ಕರಾವಳಿ ನಿಯಂತ್ರಣ ವಲಯ ಅಧಿಸೂಚನೆಯನ್ನು ಉಲ್ಲಂಘಿಸಿ,* ಅನಧಿಕೃತ *ನಿರ್ಮಿಸಲಾದ ಎಲ್ಲಾ ನಿರ್ಮಾಣಗಳನ್ನು ಸಂಪೂರ್ಣವಾಗಿ ತೆರವುಗೊಳಿಸುವಂತೆ* ಹೆಚ್ಚುವರಿ ಜಿಲ್ಲಾಧಿಕಾರಿಗಳು ಕಾರವಾರ ಇವರಿಗೆ ಪರಿಸರ (ಸಂರಕ್ಷಣೆ) ಕಾಯ್ದೆ 1986 ಕಾಯ್ದೆ ***1986*** *ರ ಸೆಕ್ಷನ್* 5 ರಂತೆ ***(Direction)*** *ನಿರ್ದೇಶನವನ್ನು ನೀಡಲು ತೀರ್ಮಾನಿಸಲಾಯಿತು.*

ನ್ಯಾಯಾಲಯದ ಪ್ರಕರಣ

39.4.1 ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ ಉಲ್ಲಂಘಿಸಿ ಉಡುಪಿ ಜಿಲ್ಲೆ, ಕೋಡಿ ಕನ್ಯಾನ ಹೊಳೆಯಲ್ಲಿ ಹೂಳು ತೆಗೆದು ನದಿಯನ್ನು ಒತ್ತುವರಿ ಮಾಡಿರುವ ಬಗ್ಗೆ **(NGT Application No. 71/2017). (ಅಪಜೀ 6 ಇಎಎ 2017).**

ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕೆ ವಿಭಾಗ, ಉಡುಪಿ ಇವರು ಕೋಡಿ ಗ್ರಾಮದ ಸೇತುವೆ ಬಳಿ ನದಿಯ ಹೂಳೆತ್ತಿ ಹೂಳು ಮತ್ತು ಮರಳನ್ನು ನದಿ ದಡದ ಕಡೆಗೆ ತುಂಬಿಸಿ, ನದಿಯನ್ನು ಅತಿಕ್ರಮಣ ಮಾಡಿದ್ದು, ಸದರಿ ಪ್ರದೇಶವು CRZ-I, III ಹಾಗೂ IV ರ ಜೈವಿಕ ಸೂಕ್ಷ್ಮ ಪ್ರದೇಶವಾಗಿದ್ದು, ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2011ರ ಪ್ಯಾರಾ 3 (iv) ರಂತೆ ಇದು ನಿಷೇಧಿಸಲ್ಪಟ್ಟ ಚಟುವಟಿಕೆಯಾಗಿರುವುದರಿಂದ ಸದರಿ ಅಧಿಸೂಚನೆಯಂತೆ ಉಲ್ಲಂಘನೆಯಾಗಿರುತ್ತದೆ ಎಂದು ಪ್ರಾದೇಶಿಕ ನಿರ್ದೇಶಕರು ದಿನಾಂಕ: 30.11.2018 ರಂದು ವರದಿ ಮಾಡಿರುತ್ತಾರೆ.

ದಿನಾಂಕ: 03.07.2019 ರಂದು ನಡೆದ ಕರ್ನಾಟಕ ರಾಜ್ಯ ಕಡಲ ತೀರ ವಲಯ ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ನಿರ್ಣಯಿಸಿದಂತೆ, CRZ ಅಧಿಸೂಚನೆಯ ಉಲ್ಲಂಘನೆ ಕುರಿತು ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕೆ ವಿಭಾಗ, ಉಡುಪಿ ಇವರಿಗೆ ನದಿಯ ಹೂಳನ್ನು ಎತ್ತಿ ನದಿಯನ್ನು ಅತಿ ಕ್ರಮಿಸಿರುವುದರಿಂದ ಪರಿಸರ (ಸಂರಕ್ಷಣೆ) 1986 ರ ಕಾಯ್ದೆ ಸೆಕ್ಷನ್ 19 ರಡಿಯಲ್ಲಿ ಅವರ ವಿರುದ್ಧ ಪ್ರಕರಣವನ್ನು ದಾಖಲಿಸುವ ಬಗ್ಗೆ ನೋಟೀಸ್ ನೀಡಲಾಗಿತ್ತು ಹಾಗೂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಸಣ್ಣ ನೀರಾವರ ಉಪವಿಭಾಗ, ಉಡುಪಿ ಇವರಿಗೆ ಸದರಿ ಒತ್ತುವರಿ ಜಾಗದಲ್ಲಿ ಕಲ್ಲು ಮಣ್ಣು ತುಂಬಿಸಿ ರಸ್ತೆ ನಿರ್ಮಿಸಿರುವುದಕ್ಕಾಗಿ ಪರಿಸರ (ಸಂರಕ್ಷಣೆ) 1986 ರ ಕಾಯ್ದೆ ಸೆಕ್ಷನ್ 19 ರಡಿಯಲ್ಲಿ ಅವರ ವಿರುದ್ಧ ಪ್ರಕರಣವನ್ನು ದಾಖಲಿಸುವ ಬಗ್ಗೆ ನೋಟೀಸ್ ನೀಡಲಾಗಿತ್ತು.

ಇದು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಟೆಂಡರ್ ಆಧಾರದಲ್ಲಿ ಸದರಿ ಕಾಮಗಾರಿಯನ್ನು ಕೈಗೊಳ್ಳಲಾಗಿದೆ ಎಂದು ಉತ್ತರ ನೀಡಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ದಿನಾಂಕ: 14.02.2020 ರಂದು ನಡೆದ ಕರ್ನಾಟಕ ರಾಜ್ಯ ಕಡಲ ತೀರ ವಲಯ ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಲಾಗಿತ್ತು. ಶ್ರೀ. ಥಾಮಸ್ ರೊಡ್ರಿಗಸ್ ಹಾಗೂ ಇತರರು ಅರ್ಜಿ ಸಂಖ್ಯೆ: 71/2017 ರಂತೆ ಈಗಾಗಲೇ ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ, ಚೆನ್ನೈಯಲ್ಲಿ ಪ್ರಕರಣ ದಾಖಲಿಸಿರುವುದನ್ನು ಗಮನಿಸಿ ಪ್ರಾಧಿಕಾರದ ನಿರ್ಣಯದಂತೆ ಈ ಕೆಳಕಂಡಂತೆ ಕ್ರಮವಹಿಸಲಾಗಿತ್ತು.

1. ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕೆ ವಿಭಾಗ, ಉಡುಪಿ ರವರು ಕೋಡಿ ಗ್ರಾಮದ ಸೇತುವೆ ಬಳಿ ನದಿಯ ಹೂಳೆತ್ತಿ ಹೂಳು ಮತ್ತು ಮರಳನ್ನು ನದಿ ದಡದ ಕಡೆಗೆ ತುಂಬಿಸಿರುವುದರಿಂದ ಪರಿಸರದ ಮೇಲೆ ಆಗಿರುವ ಹಾನಿಯ ಬಗ್ಗೆ ವಿವರವಾದ ಅಧ್ಯಯನ ನಡೆಸಿ ವರದಿಯನ್ನು ಸಲ್ಲಿಸುವುದು ಹಾಗೂ ಸದರಿ ಹಾನಿಯನ್ನು ಸರಿಪಡಿಸಲು ತಗಲಬಹುದಾದ ವೆಚ್ಚದ ವಿವರವನ್ನು ಸಲ್ಲಿಸುವುದು ಮತ್ತು ನದಿಯ ದಡದ ಮೇಲೆ ಶೇಖರಿಸಿರುವ ಮರಳನ್ನು ತೆರವುಗೊಳಿಸಿ ಸದರಿ ಸ್ಥಳವನ್ನು ಯಥಾಸ್ಥಿತಿಗೆ ತರುವಂತೆ ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕೆ ವಿಭಾಗ, ಉಡುಪಿ ರವರಿಗೆ ಸೂಚನೆ ನೀಡಲಾಗಿತ್ತು.

2. CRZ ಅಧಿಸೂಚನೆಯನ್ನು ಉಲ್ಲಂಘಿಸಿರುವ ಕಾರಣ ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕೆ ವಿಭಾಗ, ಉಡುಪಿ ರವರ ವಿರುದ್ಧ ಪರಿಸರ ರಕ್ಷಣೆ ಕಾಯ್ದೆ 1986 ಸೆಕ್ಷನ್ 19 ರಂತೆ ಮೊಕದ್ದಮೆ ದಾಖಲಿಸುವಂತೆ ಪ್ರಾದೇಶಿಕ ನಿರ್ದೇಶಕರು, ಉಡುಪಿ ರವರಿಗೆ ಸೂಚನೆ ನೀಡಲಾಗಿತ್ತು.

3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಸಣ್ಣ ನೀರಾವರಿ ಉಪವಿಭಾಗ, ಉಡುಪಿ ಇವರು CRZ ಅನುಮತಿ ಪಡೆಯದೇ ಕೋಡಿ ಗ್ರಾಮದ ಸೇತುವೆ ಬಳಿ ಹೂಳೆತ್ತಿ ಮರಳು ತುಂಬಿಸಲಾದ ಪ್ರದೇಶದ ಸುತ್ತ ಕಲ್ಲು & ಮಣ್ಣು ತುಂಬಿಸಿ ರಸ್ತೆ ನಿರ್ಮಾಣ ಮಾಡಿ ನದಿಯ ಭಾಗವನ್ನು ಒತ್ತುವರಿ ಮಾಡಿದ್ದು, ಸದರಿ ಸ್ಥಳದಲ್ಲಿರುವ ಕಾಂಡ್ಲವನ ನದಿಯ ಸಂಪರ್ಕ ಕಳೆದುಕೊಂಡು ಉಪ್ಪಿನಾಂಶದ ಕೊರತೆಯಿಂದ ನಾಶವಾಗುವ ಸ್ಥಿತಿಯಲ್ಲಿರುವುದರಿಂದ ಪರಿಸರ ಮೇಲೆ ಆಗಿರುವ ಹಾನಿಯ ಬಗ್ಗೆ ವಿವರವಾದ ಅಧ್ಯಯನ ನಡೆಸಿ ವರದಿಯನ್ನು ಸಲ್ಲಿಸುವಂತೆ ಹಾಗೂ ಸದರಿ ಹಾನಿಯನ್ನು ಸರಿಪಡಿಸಲು ತಗಲಬಹುದಾದ ವೆಚ್ಚದ ವಿವರವನ್ನು ಸಲ್ಲಿಸುವಂಯೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಸಣ್ಣ ನೀರಾವರಿ ಉಪವಿಭಾಗ, ಉಡುಪಿ ರವರಿಗೆ ಸೂಚನೆ ನೀಡಲಾಗಿತ್ತು.

4. CRZ ಅಧಿಸೂಚನೆಯನ್ನು ಉಲ್ಲಂಘಿಸಿರುವ ಕಾರಣ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಸಣ್ಣ ನೀರಾವರಿ ಉಪವಿಭಾಗ, ಉಡುಪಿ ರವರ ವಿರುದ್ಧ ಪರಿಸರ ರಕ್ಷಣೆ ಕಾಯ್ದೆ 1986 ಸೆಕ್ಷನ್ 19 ರಂತೆ ಮೊಕದ್ದಮೆ ದಾಖಲಿಸುವಂತೆ ಪ್ರಾದೇಶಿಕ ನಿರ್ದೇಶಕರು, ಉಡುಪಿ ರವರಿಗೆ ಸೂಚನೆ ನೀಡಲಾಗಿತ್ತು.

ಅರ್ಜಿ ಸಂಖ್ಯೆ: 71/2017 ರ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಪೀಠ, ಚೆನ್ನೈ ಪೀಠವು ದಿನಾಂಕ;27.7.2021ರಂದು ನೀಡಿರುವ ಆದೇಶದನ್ವಯ ಉಲ್ಲಂಘನೆದಾರರಾದ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಡುಪಿ ಹಾಗೂ

ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಉಪ ವಿಭಾಗ, ಉಡುಪಿ ರವರಿಗೆ ಪರಿಸರ ಪರಿಹಾರ ಮೊತ್ತ ರೂ.2,00,65,165/- ಗಳನ್ನು ಪಾವತಿಸುವಂತೆ ನಿರ್ದೇಶಿಸಿದ್ದು,

ಪರಿಸರ ಪರಿಹಾರ (Environmental Compensation) ಮೊತ್ತದ ವಿವರಗಳು ಈ ಕೆಳಗಿನಂತಿರುತ್ತದೆ.

| Sl No. | Environmental damage/Restoration | Amount (Rs) |
|---|---|---|
| 1 | Environmental damage/Restoration | 72, 14, 715/- |
| 2 | Restoration cost of the 5.9 acres of reclaimed land | 1,10,34,270/- |
| 2a | Cost of removal of dumped dredged material | 1,10,34,270/- |
| 2b | Cost of removal of bund constructed | 12,88,980/- |
| 2c | Restoration cost of mangrove | 5,27,200/- |
| | Total | Rs.2,00,65,165/- |

ಸದರಿ ಆದೇಶದ ಕಂಡಿಕೆ 46 (4) ರಲ್ಲಿ ಸದರಿ ಪ್ರದೇಶದ ಪುನಶ್ಚೇತನ ಪ್ರಕ್ರಿಯೆ (restoration process)ಗಾಗಿ ಅಗತ್ಯವಿರುವ ಅಧ್ಯಯನ ವರದಿಯನ್ನು ಪ್ರಾಧಿಕಾರವು ನಡೆಸುವಂತೆ ನಿರ್ದೇಶಿಸಿದ್ದು, ಸದರಿ ಅಧ್ಯಯನಕ್ಕೆ ಹೆಚ್ಚುವರಿ ವೆಚ್ಚದ ಅಗತ್ಯವಿದ್ದಲ್ಲಿ, ಉಲ್ಲಂಘನೆದಾರರಿಂದಲೇ ಭರಿಸುವಂತೆ ಸೂಚಿಸಲಾಗಿರುತ್ತದೆ.

ಅಂತೆಯೇ, ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಪೀಠ, ಚೆನ್ನೈ ನೀಡಿರುವ ಆದೇಶದಂತೆ ಉಲ್ಲಂಘನೆದಾರರಿಂದ ಪರಿಸರ ಪರಿಹಾರ ಮೊತ್ತವನ್ನು ಪಡೆದು ಬ್ಯಾಂಕ್‌ನಲ್ಲಿ ಖಾತೆ ತೆರೆಯಲು ಕಡತ ಸಂಖ್ಯೆ: ಇ-ಅಪಜೀ 254 ಸಿ.ಆರ್.ಝಡ್. 2021ರಲ್ಲಿ ಆರ್ಥಿಕ ಇಲಾಖೆಯಿಂದ ಪಡೆದ ಅನುಮತಿಯಂತೆ ಎಸ್.ಬಿ.ಐ., ಬಹುಮಹಡಿ ಕಟ್ಟಡ ಶಾಖೆ ಯಲ್ಲಿ ಈ ಸಂಬಂಧ "ಕರಾವಳಿ ಪರಿಸರ ನಿರ್ವಹಣಾ ಫಂಡ್" ಹೆಸರಿನಲ್ಲಿ ಅಕೌಂಟ್ ನ್ನು ತೆರೆಯಲಾಗಿದ್ದು, ಪರಿಹಾರ ಮೊತ್ತವನ್ನು ಸದರಿ ಖಾತೆಗೆ ಪಾವತಿಸುವಂತೆ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಡುಪಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಉಪ ವಿಭಾಗ, ಉಡುಪಿ ರವರಿಗೆ ದಿನಾಂಕ:22.7.2022 ರಂದು ಪತ್ರವನ್ನು ಹಾಗೂ ದಿನಾಂಕ: 16.11.2022 ರಂದು ನೆನಪೋಲೆ ಕಳುಹಿಸಲಾಗಿರುತ್ತದೆ. ಆದಾಗ್ಯೂ, ಪರಿಸರ ಪರಿಹಾರ ಮೊತ್ತವು ಇದುವರೆಗೂ ಸಂಬಂಧಪಟ್ಟ ಖಾತೆಗೆ ಜಮೆಯಾಗಿರುವುದಿಲ್ಲ.

ಮುಂದುವರೆದು, ಉಡುಪಿ ಜಿಲ್ಲೆ ಕೋಡಿ ಕನ್ಯಾನ ಹೊಳೆಯಲ್ಲಿ ಹೂಳು ತೆಗೆದು ನದಿಯನ್ನು ಒತ್ತುವರಿ ಮಾಡಿರುವ ಪ್ರದೇಶದ ಪುನಶ್ಚೇತನ ಅಧ್ಯಯನಕ್ಕೆ EMPRI ಸಂಸ್ಥೆಯ ಸೇವೆಯನ್ನು ರೂ.11,31,500/- ರ ವೆಚ್ಚದಲ್ಲಿ ಪಡೆಯಲು ನಿರ್ಧರಿಸಿರುವಂತೆ ಆರ್ಥಿಕ ಇಲಾಖೆಯಿಂದ ಕೆಟಿಪಿಪಿ ಅಧಿನಿಯಮ 1999ರ ಸೆಕ್ಷನ್ 4(ಜಿ)ರಡಿ ವಿನಾಯಿತಿ ಪಡೆಯಲಾಗಿರುತ್ತದೆ.

ದಿನಾಂಕ: **16.11.2022** ರಂದು ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಡುಪಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಉಪ ವಿಭಾಗ, ಉಡುಪಿ ರವರಿಗೆ ಪರಿಸರ ಪರಿಹಾರ ಮೊತ್ತವನ್ನು ಪಾವತಿಸುವಂತೆ ನೆನಪೋಲೆಯನ್ನು ಕಳುಹಿಸಲಾಗಿದೆ.

*ಪ್ರಾಧಿಕಾರವು ಸದರಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಗಿ, ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಪೀಠ, ಚೆನ್ನೈ ನೀಡಿರುವ ಆದೇಶದಂತೆ ರೂ. 2,00,65,165/- ಗಳ ಪರಿಸರ ಪರಿಹಾರ ಮೊತ್ತವನ್ನು ಪ್ರಾಧಿಕಾರಕ್ಕೆ ಪಾವತಿಸಲು ಕ್ರಮವಹಿಸುತ್ತಿರುವುದಾಗಿ ಮೀನುಗಾರಿಕಾ ನಿರ್ದೇಶಕರು ಪ್ರಾಧಿಕಾರಕ್ಕೆ ತಿಳಿಸಿದರು. ಒಂದು ವೇಳೆ ಪರಿಸರ ಪರಿಹಾರ ಮೊತ್ತವನ್ನು ಪಾವತಿಸದಿದ್ದಲ್ಲಿ ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಪೀಠದ ಗಮನಕ್ಕೆ ತರಲಾಗುವುದು ಎಂದು ಮೀನುಗಾರಿಕೆ ನಿರ್ದೇಶಕರಿಗೆ ತಿಳಿಸಲಾಯಿತು. ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಪೀಠದ ಆದೇಶದಂತೆ ಪರಿಸರ ಪರಿಹಾರ ಮೊತ್ತವನ್ನು ಪಾವತಿಸುವ ಬಗ್ಗೆ ಶೀಘ್ರ ಕ್ರಮಕೈಗೊಂಡು 15 ದಿನಗಳೊಳಗಾಗಿ ಪಾವತಿಸುವಂತೆ ಮೀನುಗಾರಿಕೆ ನಿರ್ದೇಶಕರಿಗೆ ಸೂಚನೆ ನೀಡಲಾಯಿತು.*

**With the permission of Chair**

1. **Preparation of CRZ map in 1:4000 Scale**

**As per para 8 (e) of CRZ Notification 2019**, CRZ map in 1:4000 scale indicating HTL, LTL demarcation and distance of the nearest project boundary (in meters) from HTL and project layout superimposed with classification of project location is mandatory for CRZ clearance.

However, as per OM dated 8th August 2019, MoEF & CC has Authorised the following institution for preparations/updation of CZMPs as per CRZ Notification 2019.

| Sl. No. | Name of the Institutes/Agency |
|---|---|
| 1. | Space Application Centre, Ahmedabad |
| 2. | Centre for Earth Sciences Studies, Thiruvanthapuram |
| 3. | Institute for Remote Sensing, Anna University, Chennai |
| 4. | National Centre for Sustainable Coastal Management (NCSCM), Chennai |
| 5. | National Institute of Environmental Studies and Wetland Management, Kolkata |

| | |
|---|---|
| 6. | National Institute of Oceanography(NIO), Panjim, Goa |
| 7. | National Institute of Ocean Technology (NIOT), Chennai. |

The CAMP 2019 of Karnataka has been prepared by NCSCM, Chennai and has been approved of NCZMA. The Authority further opined that since Karnataka State Remote Sensing Applications Centre (KSRSAC) Bengaluru has technical capability, the work of preparing CRZ map in 1:4000 scale for each project may be entrusted to KSRSAC. Hence the Authority decided to recommend the said institute to MoEF & CC for kind consideration to have KSRSAC as one of the identified agency for preparation of CZMP maps.

*ವಂದನೆಗಳೊಂದಿಗೆ ಸಭೆ ಮುಕ್ತಾಯವಾಯಿತು.*

ಸಹಿ/-

*(ಜಾವೇದ್ ಅಖ್ತರ್)*

*ಅಧ್ಯಕ್ಷರು,* ಕರ್ನಾಟಕ ರಾಜ್ಯಕಡಲ ತೀರ ವಲಯ ನಿರ್ವಹಣಾ ಪ್ರಾಧಿಕಾರ

ಮತ್ತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.

(ಆರ್. ಗೋಕುಲ್)

ಸದಸ್ಯ ಕಾರ್ಯದರ್ಶಿಗಳು,

ಕರ್ನಾಟಕ ರಾಜ್ಯ ಕಡಲ ತೀರ ವಲಯ ನಿರ್ವಹಣಾ ಪ್ರಾಧಿಕಾರ

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.

ಸಂಖ್ಯೆ: ಅಪಜೀ 204 ಸಿಆರ್ ಝಡ್ 2021

** *** **